ಸಿ.ಸಿಃ 611/2023
ಪಿ.ಡಬ್ಲೂಃ 01
ರಾಮು ಲಮಾಣಿ

## ದಿವಾಣಿ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಬಸವನ-ಬಾಗೇವಾಡಿ

**ಸಾಕ್ಷಿಗೆ ದಿನಾಂಕ 28.02.2024 ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲು ಆರೋಪಿ ಪರ ಶ್ರೀಮತಿ ಎಸ್.ಆರ್.ಜಿ ವಕೀಲರಿಂದಃ**

17. ಆರೋಪಿಗೆ ಎರಡು ತೋಟಗಳು ಇವೆ ಎಂದರೆ ಇರಬಹುದು. ಆರೋಪಿ ಒಂದರಲ್ಲಿ ಕಬ್ಬು ಮತ್ತು ಇನ್ನೊಂದರಲ್ಲಿ ದ್ರಾಕ್ಷಿ ಬೆಳೆದಿದ್ದಾನೆ ಎಂದರೆ ಸರಿ. ದಿಃ 25.07.2022 ಆರೋಪಿ ಮಣೂರು ಗ್ರಾಮದಲ್ಲಿ ಸ.ನಂಬರ 249/8 ರಲ್ಲಿ 3 ಎಕರೆ 6 ಗುಂಟೆ ಜಮೀನನ್ನು ಖರೀದಿಸಿದ್ದಾನೆ ಎಂದರೆ ಸರಿ. ಮತ್ತು ಸದರಿ ಜಮೀನನ್ನು ನೀರಾವರಿ ಮಾಡಿದ್ದಾನೆ ಎಂದರೆ ಸರಿ.

18. ದಿಃ02.07.2017 ರಂದು ಆರೋಪಿ ಲೋಡಿಂಗ್ ಕಾಂಕ್ರಿಟ್ ಮಿಕ್ಸರ್ ನ್ನು ಖರೀದಿಸಿದ್ದಾನೆ ಎಂದರೆ ಸಾಕ್ಷಿಯು ಖರೀದಿಸಿದ್ದಾನೆ ಆದರೆ ನನಗೆ ದಿನಾಂಕ ನೆನಪಿಲ್ಲ. ಆರೋಪಿ ದಿಃ17.11.2018 ರಂದು ಜೆ.ಸಿ.ಬಿ. 3ಡಿ.ಎಕ್ಸ್ ನ್ನು ಖರೀದಿಸಿದ್ದಾನೆ ಎಂದರೆ ಸರಿ. ಆರೋಪಿ ದಿಃ 08.04.2019 ರಂದು Ertiga ಕಾರನ್ನು ಖರೀದಿಸಿದ್ದಾನೆ ಎಂದರೆ ಸರಿ. ಆರೋಪಿ ಇವೆಲ್ಲಾ ವಾಹನಗಳನ್ನು ಬ್ಯಾಂಕಿನಲ್ಲಿ ಸಾಲ ಮಾಡಿ ಖರೀದಿಸಿದ್ದಾನೆ ಎಂದರೆ ನನಗೆ ಗೊತ್ತಿಲ್ಲ. ಈ ಎಲ್ಲಾ ವಾಹನಗಳ ಮೂಲಕ ಬಂದ ಬಾಡಿಗೆ ಹಣದಿಂದಲೇ ತನ್ನ ಸಂಸಾರವನ್ನು ಮತ್ತು ಸಾಲದ ಕಂತುಗಳನ್ನು ಭರಿಸುತ್ತಾನೆ ಎಂದರೆ ನನಗೆ ಗೊತ್ತಿಲ್ಲ.

19. ಆರೋಪಿ ಈವರೆಗೂ ಮೇಲೆ ವಿವರಿಸಿದ ಸಾಲವನ್ನು ಮರುಪಾವತಿ ಮಾಡುವುದರಲ್ಲಿ ತಪ್ಪಿಸಿಕೊಂಡಿಲ್ಲ ಎಂದರೆ ನನಗೆ ಗೊತ್ತಿಲ್ಲ. ಈ ಮೂರು ಸಾಲದ ಕಂತುಗಳನ್ನು ಭರಿಸುವ ಸಲುವಾಗಿಯೇ ಆರೋಪಿ 3ಚೆಕ್ಕುಗಳು ಎಂದರೆ ಚೆಕ್ಕು ನಂಬರಗಳು, 571805, 571806,571807 ಗಳನ್ನು ಸಹಿ ಮಾಡಿ ತನ್ನ ಮನೆಯಲ್ಲಿ ಇಟ್ಟಿದ್ದ ಎಂದರೆ ಸರಿಯಲ್ಲ.

20. ಆರೋಪಿಗೆ ಇಂಗ್ಲೀಷ್ ನಲ್ಲಿ ಓದಲು ಬರೆಯಲು ಬರುವುದಿಲ್ಲ ಎಂದರೆ ನನಗೆ ಗೊತ್ತಿಲ್ಲ. ಇದೇ ನ್ಯಾಯಾಲಯದಲ್ಲಿ ಇದೇ ಆರೋಪಿಯ ವಿರುದ್ಧ ಬಾಕಿಯಿರುವ C.C No.612/2023 ರ ಫಿರ್ಯಾದಿಯ ಮಗನಾದ ರಮೇಶ ಮತ್ತು ನಾನು ಆರೋಪಿಯ ಮನೆಗೆ ಹೋಗಿ ಸದರಿ ಮೂರು ಚೆಕ್ಕುಗಳನ್ನು ಕದ್ದು ತಂದಿದ್ದೇವು ಎಂದರೆ ಸರಿಯಲ್ಲ.

21. ಸದರಿ ಚೆಕ್ಕುಗಳನ್ನು ಆರೋಪಿ ಎಷ್ಟು ಹುಡುಕಿದರೂ ಸಿಗದಿದ್ದಾಗ ಅವನು ಸದರಿ ವಿಚಾರವನ್ನು ನಮೂದಿಸಿ ತನ್ನ ಬ್ಯಾಂಕಿಗೆ ಸದರಿ ಚೆಕ್ಕುಗಳನ್ನು ನಗದೀಕರಣಗೊಳಿಸಬಾರದು (Stop payment) ಎಂದು ಅರ್ಜಿಯನ್ನು ಜುಲೈ 2022 ರಲ್ಲಿಯೇ ನೀಡಿದ್ದನು ಎಂದರೆ ನನಗೆ ಗೊತ್ತಿಲ್ಲ.

22. ಜನೇವರಿ 2023 ರಲ್ಲಿ ಆರೋಪಿ ತಾನು ಕಳೆದಕೊಂಡ ಸದರಿ ಮೂರು ಚೆಕ್ಕುಗಳು ನನ್ನ ಮತ್ತು ರಮೇಶನ ಹತ್ತಿರ ಇರುವ ವಿಚಾರ ಗೊತ್ತಾಗಿ ತನ್ನ

ವಕೀಲರ ಮೂಲಕ ನಮಗೆ ನೋಟಿಸು ನೀಡಿದ್ದನು ಎಂದರೆ ಸರಿ. ಸದರಿ ನೋಟಿಸಿಗೆ ನಾನು ಮಾರ್ಚ್ ತಿಂಗಳವರೆಗೂ ಉತ್ತರ ನೀಡಿಲ್ಲ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಆರೋಪಿ ನೀಡಿದ ನೋಟಿಸು ತಲುಪಿದ ನಂತರ ನಾವು ತಾಂಡಾದ ಹಿರಿಯರೊಂದಿಗೆ ಮಾತುಕತೆ ನಡೆಸಿರುವುದರಿಂದ ಮತ್ತು ಅಲ್ಲಿ ಸಮಸ್ಯೆ ಪರಿಹಾರವಾಗದ ಕಾರಣ ನೋಟಿಸಿಗೆ ಉತ್ತರ ನೀಡಿರುತ್ತೇವೆ.

23. ಮಾತುಕತೆಗೆ ಇದ್ದ ಹಿರಿಯರ ಹೆಸರು, ಲಚ್ಚಪ್ಪ ನಾಯಕ್, ಭೀಮಶಿ ಲಮಾಣಿ, ಮಾರುತಿ ನಾಯಕ್, ಡೋಕಲು ಪಾಂಡು ಮತ್ತು ಇನ್ನಿತರರು ಇದ್ದರು. ಇವರೆಲ್ಲರೂ ಮಣೂರು ತಾಂಡಾದವರು ಮತ್ತು ಅವರೆಲ್ಲರೂ ನನ್ನ ಸಂಬಂಧಿಕರು. ನಾನು ಈ ರೀತಿ ನ್ಯಾಯಪಂಚಾಯಿತಿ ಕೂರಿಸಿದ ಬಗ್ಗೆ ನನ್ನ ಮರುತ್ತರದಲ್ಲೂ ಹೇಳಿಲ್ಲ, ಮತ್ತು ಇದೇ ಮೊದಲ ಬಾರಿಗೆ ನ್ಯಾಯಾಲಯದಲ್ಲಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

23. ಆರೋಪಿ ಆರ್ಥಿಕನಾಗಿ ಸಬಲನಿದ್ದು, ಅವನಿಂದ ಹಣ ಪಡೆಯಬೇಕೆಂಬ ಅವನ ವಿರುದ್ಧ ಈ ರೀತಿ ಸುಳ್ಳು ಪ್ರಕರಣ ದಾಖಲಿಸಿ, ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿ ಸನ್ 2021 ರಲ್ಲಿ ಯಾವುದೇ ವಾಹನಗಳನ್ನು, ಆಸ್ತಿಯನ್ನು ಖರೀದಿಸಿಲ್ಲ ಆದ್ದರಿಂದ ಅವನಿಗೆ ಸನ್ 2021 ರಲ್ಲಿ ಯಾವುದೇ ಹಣಕಾಸಿನ ಅವಶ್ಯಕತೆ ಇರಲಿಲ್ಲ ಎಂದರೆ ಸರಿಯಲ್ಲ.

24. ನಾನು ಸನ್ 2021 ರಲ್ಲಿ ಆರೋಪಿಗೆ 9 ಲಕ್ಷ ರೂ ನೀಡಿದ್ದೆ ಎಂದು ಸುಳ್ಳು ಪ್ರಕರಣ ದಾಖಲಿಸಿ, ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಅದರ ಮರುಪಾವತಿಗಾಗಿ ಜನೇವರಿ 2023 ರಲ್ಲಿ ಆರೋಪಿ ತನಗೆ ಸೇರಿದ ಚೆಕ್ಕು ನಂಬರ 571807 ನ್ನು ನನಗೆ ನೀಡಿದ್ದ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

25. ಆರೋಪಿ ತನ್ನ ಮನೆಯಲ್ಲಿ ಸಹಿ ಮಾಡಿ ಇಟ್ಟಿದ್ದ ಚೆಕ್ಕುಗಳನ್ನು ಕಳ್ಳತನ ಮಾಡಿ ನಾನೇ ಅದರಲ್ಲಿ ವಿಚಾರಗಳನ್ನು ನಮೂದಿಸಿ, ಮಾರ್ಚ್ 2023 ರಲ್ಲಿ ನಗದೀಕರಣಕ್ಕಾಗಿ ಬ್ಯಾಂಕಿಗೆ ಸಲ್ಲಿಸಿದ್ದೆ ಎಂದರೆ ಸರಿಯಲ್ಲ. ಜನೇವರಿ 2023 ರಲ್ಲಿ ಕಳೆದುಹೋದ ಚೆಕ್ಕುಗಳು ನನ್ನ ಮತ್ತು ರಮೇಶ ನ ಹತ್ತಿರ ಇರುವ ವಿಚಾರ ಗೊತ್ತಾಗಿ, ಆರೋಪಿ ತನ್ನ ಉಪ್ಪಲದಿನ್ನಿ ತಾಂಡಾ ಮತ್ತು ನಮ್ಮ ಮಣೂರಿನ ತಾಂಡಾದ ಹಿರಿಯನ್ನು ಸೇರಿಸಿ, ಪಂಚಾಯಿತಿ ಮಾಡಿ ಕದ್ದುಕೊಂಡ ಚೆಕ್ಕುಗಳನ್ನು ಆರೋಪಿಗೆ ಮರಳಿ ನೀಡುವಂತೆ ಹಿರಿಯರು ಹೇಳಿದ್ದರು ಎಂದರೆ ಸರಿಯಲ್ಲ. ಆದರೂ ಸಹ ಚೆಕ್ಕುಗಳನ್ನು ಮರಳಿ ನೀಡದೇ, ಆರೋಪಿಗೆ ಜೀವದ ಬೆದರಿಕೆ ಹಾಕುತ್ತಿದ್ದೆವು ಎಂದರೆ ಸರಿಯಲ್ಲ.ಆದ್ದರಿಂದ ಆರೋಪಿ ಅನಿವಾರ್ಯವಾಗಿ ನನಗೆ ಮತ್ತು ರಮೇಶನಿಗೆ ನೋಟಿಸು ನೀಡಿದನು ಎಂದರೆ ಸರಿಯಲ್ಲ. ಆದರೂ ಸಹ ನಾನು ಮತ್ತು ರಮೇಶ ನಮ್ಮ ಹತ್ತಿರ ಇದ್ದ ಆರೋಪಿಯ ಚೆಕ್ಕುಗಳನ್ನು ದುರುಪಯೋಗ ಪಡಿಸಿಕೊಂಡಿದ್ದೇವೆ ಎಂದರೆ ಸರಿಯಲ್ಲ.

ಸಿ.ಸಿಃ 611/2023
ಪಿ.ಡಬ್ಲೂಃ 01
ರಾಮು ಲಮಾಣಿ

26. ಆರೋಪಿ ನನ್ನ ಹತ್ತಿರ ಯಾವುದೇ ಸಾಲ ಪಡೆದಿಲ್ಲ ಮತ್ತು ಸಾಲದ ಮರುಪಾವತಿಗಾಗಿ ಯಾವುದೇ ಚೆಕ್ಕನ್ನು ನೀಡಿಲ್ಲ ಎಂದರೆ ಸರಿಯಲ್ಲ. ಆರೋಪಿಗೆ 9 ಲಕ್ಷ ರೂ ಹಣವನ್ನು ಸಾಲವಾಗಿ ನೀಡುವಷ್ಟ ಆರ್ಥಿಕ ಸಬಲತೆಯನ್ನು ನಾನು ಹೊಂದಿಲ್ಲ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ನಾನು ಆಗ ಹೊಲ ಮಾರಿದ್ದೆವು ಎಂದು ನುಡಿಯುತ್ತಾರೆ. ನಾನು ಈ ರೀತಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದೂರಿನಲ್ಲಿ ನಮೂದಿಸಿದ ಎಲ್ಲಾ ಅಂಶಗಳು ಸುಳ್ಳು ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಖ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು)**

**ಓ.ಹೇ.ಕೆ.ಸರಿ ಅದೆ.**

**ಸಿವಿಲ್ ನ್ಯಾಯಾಧೀಶರು ಹಾಗೂ**
**ಪ್ರ.ದ.ನ್ಯಾ.ದಂಡಾಧಿಕಾರಿಗಳು,**
**ಬಸವನ-ಬಾಗೇವಾಡಿ.**